ಅಲ್ಲಿದೆ ಪುರಸಭೆಯ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗುವುದು.

ಶಾಸನ ರಚನೆ ಕಾರ್ಯಕಲಾಪಗಳು

1991ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ ಮಂಡವ ಅನುಮತಿ ಕೋರಿಕೆ

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆಯವರೆ?

1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇವೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ : "1991ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು".

+ ಶ್ರೀ ಡಿ.ಬಿ. ಚಂದ್ರೇಗೌಡ (ವಿತೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷಿಣಿಯವರೆ, ಇದನ್ನು ಸ್ವಾಗತ ಮಾಡುವುದಕ್ಕಾದರೂ ನನಗೆ ಅವಕಾಶವನ್ನು ಕೊಡಿ. ಇದರ ಉದ್ದೇಶ ನನಗೆ ಗೊತ್ತಿದೆ. ಉದ್ದೇಶದ ವಿವರಕ್ಕೆ ನಾನು ಹೋಗುವುದಿಲ್ಲ. ಕೊನೆಯ ಪಕ್ಷದ ಇದು ರೆಕಾರ್ಡ್‌ನಲ್ಲಾದರೂ ಇರಲಿ. ಇದು ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದ್ದ ವಿಚಾರ ಇಲ್ಲಿ ಸರ್ಕಾರ ಒಂದು ನಿರ್ಧಾರವನ್ನೇನೋ ತೆಗೆದುಕೊಂಡಿದೆ. ಈ ಬಗ್ಗೆ ಶಾಸನಬದ್ಧವಾದ ತೊಂದರೆಗಳು ಏನಿದೆಯೋ ನನಗೆ ತಿಳಿಯುವುದಿಲ್ಲ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಜನವರಿ 26ನೇ ತಾರೀಖು ಮತ್ತು ಆಗಸ್ಟ್ 15ನೇ ತಾರೀಖು ರಾಷ್ಟ್ರಧ್ವಜವನ್ನು ಹಾರಿಸತಕ್ಕ ಕಾರ್ಯಕ್ರಮ ಏನಿದೆ. ಇದೂ ಕೂಡ ಬಾವುಟಗಳ ವ್ಯಾಪ್ತಿಯಲ್ಲಿ ಬರತಕ್ಕ ನಿಯಮ ಇದೆ. ಆ ನಿಯಮದಲ್ಲಿ ನೀವು ಏನು ಹೇಳಿದ್ದೀರಿ. ತಾಲ್ಲೂಕಿನ ಮತ್ತು ಜಿಲ್ಲೆಯ ಎಕ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾಧಿಕಾರಿ ಅಥವಾ ತಹಸಿಲ್ದಾರರು ಬಾವುಟವನ್ನು ಹಾರಿಸುವುದಕ್ಕೆ ಅವಕಾಶ ಇದೆ ಎಂದು ಇಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶವಿಲ್ಲ. ಆದರೆ ಚುನಾಯಿತ ಪ್ರತಿನಿಧಿಗಳು ಈ ಬಾವುಟವನ್ನು ಹಾರಿಸಬಾರದೆಂದು ಎಲ್ಲೂ ನಿಬಂಧನೆ ಇಲ್ಲ. (ಇದು ಫ್ಲ್ಯಾಗ್ ಆಕ್ಟ್ ಕೆಳಗಡೆ) ಇದನ್ನು ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುತ್ತೇನೆ.

ಜನವರಿ 26ನೇ ತಾರೀಖು ಇರಬಹುದು ಅಥವಾ ಆಗಸ್ಟ್ 15ನೇ ತಾರೀಖು ಇರಬಹುದು. ಈ ಸಂದರ್ಭದಲ್ಲಿ ತಹಸಿಲ್ದಾರ್‌ರವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಬಾವುಟವನ್ನು ಹಾರಿಸತಕ್ಕ ಒಂದು ಅಧಿಕಾರ ಏನಿದೆ ಅದನ್ನು ಪುನರ್ ಪರಿಶೀಲನೆ ಮಾಡಿ, ಎಲ್ಲೆಲ್ಲಿ ಚುನಾಯಿತ ಪ್ರತಿನಿಧಿಗಳಿರುತ್ತಾರೆ. ಅವರಿಗೆ ಗೌರವವನ್ನು ಕೊಡಬೇಕು. ಇದನ್ನು ಕೊಡಬಾರದೆಂದು ಎಲ್ಲೂ ಹೇಳಿಲ್ಲ. ಇಲ್ಲಿ ಇಂಟರ್‌ಪ್ರಿಟೇಷನ್ ಏನು ಮಾಡುತ್ತಾರೆ ಎಂಬುದನ್ನು ತಾವು ನೋಡಬೇಕು. ಎಕ್ಸಿಕ್ಯುಟಿವ್ ಹೆಡ್ ಅನ್ನುವಾಗ ಎಕ್ಸಿಕ್ಯುಟಿವ್ ಹೆಡ್ ಯಾರು? ಸರ್ಕಾರದ ಪ್ರತಿನಿಧಿಗಳದ್ದು.

ಅಧ್ಯಕ್ಷರು : ಮಾನ್ಯ ಸದಸ್ಯರ ತಿದ್ದುಪಡಿಯನ್ನು ವಾಪಸ್ಸು ಪಡೆಯಲು ಸಭೆ ಅನುಮತಿ ನೀಡಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಮಾನ್ಯ ಆಹಾರಮಂತ್ರಿಗಳು ಇಲ್ಲೇ ಇರುವುದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯುಗಾದಿ ಹಬ್ಬಕ್ಕೆ ನಾಗರೀಕರಿಗೆ ಒಳ್ಳೆಯ ಅಕ್ಕಿ ಮತ್ತು ಸಕ್ಕರೆಯನ್ನಾದರು ಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೆ ಮಾನ್ಯ ಉಪನಾಯಕರಿಗೆ ಎಲ್ಲಾ ಗೊತ್ತಿದೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ ಕೊಟ್ಟೇ ಇಲ್ಲ. ಸುಮ್ಮನೆ ಏತಕ್ಕೆ ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಈ ತಿದ್ದುಪಡಿಗೂ ಸಕ್ಕರೆಗೂ ಗೋಧಿಗೂ ಯಾವುದೇ ಸಂಬಂಧವಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸದಸ್ಯರು ಭಾವನೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ಸಿಂಧ್ಯರವರು ತಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ.

ಯಾರೇ ಒಬ್ಬ ವ್ಯಕ್ತಿಯ ಮೇಲೆ ಕ್ರಮ ಜರುಗಿಸುವ ಸಂದರ್ಭ ಬಂದಾಗ ಅವರು ಮೂರು ತಿಂಗಳ ಶಿಕ್ಷೆಗೆ ಪಾತ್ರರಾಗಬಹುದೆನ್ನತಕ್ಕಂಥ ಒಂದು ವಿಷಯವನ್ನು ಅಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ ಇದನ್ನು 6 ತಿಂಗಳಿಗೆ ಏರಿಸಬೇಕು. 5 ಸಾವಿರ ರೂಪಾಯಿಗಳವರೆಗೆ ತಾವು ದಂಡವನ್ನು ವಿಧಿಸತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇದನ್ನು ತಾವು 10 ಸಾವಿರ ರೂಪಾಯಿಗಳಿಗೆ ಏರಿಸಬೇಕು. ಈ ಮೂರು ತಿಂಗಳನ್ನು ಆರುತಿಂಗಳು ಮಾಡಬೇಕೆಂದು ನಾನು ಹೇಳತಕ್ಕಂಥದ್ದು, ಏನೋ ಮೂರು ತಿಂಗಳು ಆರೆಸ್ಟ್ ಮಾಡಿದ ಮೇಲೆ ಕೂಡಲೇ ಅತ ಬಿಡುಗಡೆ ಆಗತಕ್ಕಂಥ ಸಂದರ್ಭ ಬರಬಹುದು. ಆದ್ದರಿಂದ ಇಲ್ಲಿ ಜಾಮೀನು ಕೊಡತಕ್ಕಂಥ ಅವಕಾಶವಿರಬಾರದೆಂದು ನಾನು ವೈಯಕ್ತಿಕವಾಗಿ ವಿನಂತಿ ಮಾಡುತ್ತಿದ್ದೇನೆ.

ಬಾವುಟದ ವಿಚಾರ ನಮಗೆ ಮೊದಲಿನಿಂದಲೂ ಗೊತ್ತುಂಟು ಬೆಳಗಾಂ ನಗರದಲ್ಲಿ ನಮ್ಮ ರಾಷ್ಟ್ರದ ಧ್ವಜದ ಸಂಗದ ಒಂದು ಮರಾಠಿ ಏಕೀಕರಣ ಸಮಿತಿ ಧ್ವಜ ಸಹ ಇತ್ತು. ಅದನ್ನು ತೆಗೆಸುವ ಸಲುವಾಗಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಬಾವುಟಗಳನ್ನು ಉಪಯೋಗ ಮಾಡತಕ್ಕಂಥ ಒಂದು ಸಂದರ್ಭ ಇದರಿಂದ ಅದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರದವರು ಈ ಒಂದು ಕಾಯಿದೆಯನ್ನು ತಂದಿದ್ದಾರೆ. ಇದು ನಿಜವಾಗಿಯೂ ಸ್ತುತ್ಯಾರ್ಹವಾದುದೆಂದು ಹೇಳಬಹುದು. ಅದೇ ಪ್ರಕಾರವಾಗಿ ಈಗಾಗಲೇ ವಿರೋಧ ಪಕ್ಷದ ನಾಯಕರು ಒಂದು ಸಲಹೆಯನ್ನು ಇಟ್ಟಿದ್ದಾರೆ. ಅದೇನೆಂದರೆ ಜನವರಿ 26ರಂದು ಹಾಗೂ ಆಗಸ್ಟ್ 15ರಂದು ಸಹಿತ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ತಹಸೀಲ್ದಾರ್‌ರು, ಅಸಿಸ್ಟೆಂಟ್ ಕಮೀಷನರರು ಧ್ವಜವನ್ನು ಏರಿಸುತ್ತಾರೆ. ಅದನ್ನು ಈ ಚುನಾಯಿತ ಪ್ರತಿನಿಧಿಗಳಾದ ಎಂ.ಎಲ್.ಎ,, ಎಂ.ಎಲ್.ಸಿ. ಅವರು ಏರಿಸುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೊಟ್ಟಂತಹ ಸೂಚನೆ ಬಹಳ ಯೋಗ್ಯವಾದುದಾಗಿದೆ. ಇದನ್ನು ಈ ಮೊದಲು ಸಹ 2-3 ಸಲ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಆದರೆ ಇದೂವರೆಗೆ ಸೂಕ್ತ ಕ್ರಮ ತೆಗೆದುಕೊಂಡಿರಲಿಲ್ಲ. ಅದನ್ನು ಸಹ ಜಾರಿಗೆ ತುರವಂಥ ಕಾರ್ಯಕ್ರಮನ್ನು ಹಾಕಬೇಕು. ಏತಕ್ಕೆಂದರೆ ಚುನಾಯಿತ ಪ್ರತಿನಿಧಿಗಳಿಗೆ ಒಂದು ಗೌರವ ಇದರಿಂದ ಕೊಟ್ಟಂತಾಗುತ್ತದೆಂದು ಹೇಳಬಹುದು. ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳಬೇಕಾದ್ದು ಇಲ್ಲ, ಆದಕಾರಣ ತಾವು ತಂದಂಥ ಈ ಮಸೂದೆಯನ್ನು ನಾನು ವೈಯಕ್ತಿಕವಾಗಿಯಲ್ಲದೆ ನಮ್ಮ ಪಕ್ಷದ ಪರವಾಗಿ ಸ್ವಾಗತಿಸುತ್ತೇನೆಂದು ಹೇಳುತ್ತೇನೆ.

+ ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಸನ್ಮಾನ್ಯ ಉಪಾಧ್ಯಕ್ಷರೆಯವರೇ, ಸರ್ಕಾರದವರು ಈ ಬಿಲ್ಲನ್ನು ತಂದಿರುವ ಬಗ್ಗೆ ನಮ್ಮ ಪಕ್ಷದ ಪರವಾಗಿ ಸರ್ಕಾರದವರಿಗೆ ಸ್ವಾಗತ ಬಯಸುತ್ತೇನೆ. ಈ ಸದನದಲ್ಲಿ ಮಾನ್ಯ ವಾಟಾಳ್ ನಾಗರಾಜ್ ನಾವು ಎಲ್ಲರೂ ಧರಣಿ ಕುಳಿತಾಗ ಈ ಧ್ವಜವನ್ನು ತೆಗೆಯಬೇಕೆಂದು ಹೇಳಿದಾಗ ಹಲವಾರು ಬಾರಿ ಇದನ್ನು ತೆಗೆಯುತ್ತೇವೆಂದು ಮತ್ತು ಸರ್ಕಾರದಿಂದ ಈ ಬಗ್ಗೆ ಒಂದು ಕಾನೂನನ್ನು ಮಾಡುತ್ತೇವೆಂದು ಹೇಳಿ ಭರವಸೆಯನ್ನು ಕೊಟ್ಟರು. ಅದರಂತೆ ಈ ಸರ್ಕಾರ ಮಾಡಿರುವುದರಿಂದ ನಮ್ಮ ಪಕ್ಷದ ಪರವಾಗಿ ಮತ್ತು ನಾನು ಸಹ ಅವರಿಗೆ ಅಭಿನಂಧನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ್) : ಮಾನ್ಯ ಅಧ್ಯಕ್ಷರೇ ಇದು ರಾಷ್ಟ್ರಧ್ವಜದ ಬಗ್ಗೆ ಇರತಕ್ಕಂಥ ಗೌರವನ್ನು ವ್ಯಕ್ತಪಡಿಸುವ ಮತ್ತು ಗೌರವವನ್ನು ಸಲ್ಲಿಸುವ ವಿಷಯದಲ್ಲಿ ಒಂದು ತಿದ್ದು ಪಡಿಯಾಗಿ ಬರುತ್ತಿದೆ. ಹಲವಾರು ಪ್ರಾಧಿಕಾರಿಗಳ ಮೇಲಾಗಲಿ, ಸ್ಥಳೀಯ ಸಂಸ್ಥೆಗಳ ಮೇಲಾಗಲಿ, ರಾಷ್ಟ್ರಧ್ವಜಕ್ಕೆ ಸಿಗಬೇಕಾದಂಥ ಗೌರವ ಮಾನ ನಾವು ಇಟ್ಟು ಕೊಂಡು ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಸದನದಲ್ಲಿ ಹಲವಾರು ಸಲ ಈ ಪ್ರಸ್ತಾವನೆ ಬಂದಿದೆ. ರಾಷ್ಟ್ರಧ್ವಜಕ್ಕೆ ಆ ಗೌರವ ಆಗುತ್ತಿದೆ. ಆ ಆಗೌರವನ್ನು ತಡೆಯಲಿಕ್ಕೆ ಏನಾದರೂ ಒಂದು ತಿದ್ದುಪಡಿ ಮಾಡಬೇಕೆಂದಾಗ ಈ ಒಂದು ತಿದ್ದುಪಡಿ ನಮ್ಮ ಸರ್ಕಾರದವರು ಸಭೆಯ ಮುಂದಿಟ್ಟಿದ್ದಾರೆ.

ಇದರಲ್ಲಿ 499 (ಎ) ಬಾವುಟದ ಅಧಿಕೃತ ಪ್ರದೇಶಗಳ ವ್ಯಾಪ್ತಿಗೆ ಬರತಕ್ಕಂಥ ಸೆಕ್ಷನ್ 2(1)

ಆ ದೃಷ್ಟಿಯಿಂದ ನಗರಾಭಿವೃದ್ಧಿ ಮಂತ್ರಿಗಳು ಇಲ್ಲಿ ಏನು ಒಂದು ವಿಧೇಯಕವನ್ನು ಮಂಡನೆ ಮಾಡಿದ್ದಾರೋ, ಅದನ್ನು ಸ್ವಾಗತಿಸುತ್ತೇನೆ. ಮತ್ತು ಈ ಶಿಕ್ಷೆಯನ್ನು ಅಂದರೆ ಮೂರು ತಿಂಗಳ ಬದಲು ಆರು ತಿಂಗಳು ಮಾಡಬೇಕು ಮತ್ತು ಐದು ಸಾವಿರ ದಂಡದ ಬದಲು ಹತ್ತು ಸಾವಿರವೆಂದು ತಿದ್ದುಪಡಿಮಾಡಬೇಕು ಹೇಳುತ್ತಾ ಈ ಒಂದು ವಿಧೇಯಕದ ಹಿನ್ನೆಲೆಯಲ್ಲಿ ಮಾತನಾಡುಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೌರದ್) : ಸನ್ಮಾನ್ಯ ಅಧ್ಯಕ್ಷರೆ ಸರ್ಕಾರದವರು ಬಹಳ ದಿಟ್ಟತನದಿಂದ ಒಳ್ಳೆಯ ಬಿಲ್ಲನ್ನು ಮಂಡಿಸಿದ್ದಾರೆ. ಅದನ್ನು ಖಂಡಿತವಾಗಿ ನಾನು ಸ್ವಾಗತಿಸುತ್ತೇನೆ. ನಮ್ಮ ನಾಯಕರು ಈಗಾಗಲೆ ಅದನ್ನು ಸ್ವಾಗತಿಸಿದ್ದಾರೆ. ಇದು ಬಹಳ ಮಹತ್ವದ್ದಾಗಿದೆ. ಶ್ರೀ ಮಲ್ಲಾರಿಗೌಡರು ಹೇಳಿದಂತೆ ಮೂರು ತಿಂಗಳು ಇರತಕ್ಕಂತಹ ಶಿಕ್ಷೆಯನ್ನು ಆರು ತಿಂಗಳು ಮಾಡಬೇಕು ಮತ್ತು ಐದು ಸಾವಿರ ವಿರುವ ದಂಡವನ್ನು ಹತ್ತುಸಾವಿರಕ್ಕೆ ಹೆಚ್ಚಿಸಬೇಕು. ಜೊತೆಗೆ ಜಾಮಿನು ಇರಬಾರದು, ಏನು ಮೂರು ತಿಂಗಳು ಜೈಲಿನಲ್ಲಿದ್ದರಾಯಿತು ಎಂದು ಒಂದು ಸಾರಿ ಬಾವುಟವನ್ನು ಹಾರಿಸಿಯೇ ಬಿಡೋಣಾ ಎನ್ನುವಂತಹವರು ಬಹಳ ಇದ್ದಾರೆ, ಆದುದರಿಂದ ಶಿಕ್ಷೆಯನ್ನು ಹೆಚ್ಚು ಮಾಡಬೇಕು, ಶಿಕ್ಷೆ ಕಠಿಣವಾದರೆ ಯಾರು ಅಂತಹ ತಪ್ಪು ಮಾಡಲು ಹೋಗುವುದಿಲ್ಲ. ಮತ್ತು 26ನೇ ಜನವರಿ ಮತ್ತು ಆಗಸ್ಟ್ 15 ರಂದು ತಹಶೀಲ್ದಾರರು ಬಾವುಟವನ್ನು ಹಾರಿಸುತ್ತಾರೆ ನಾವು ಪಕ್ಕದಲ್ಲಿ ಕುಳಿತಿರಬೇಕಾಗುತ್ತದೆ. ಅದರ ಬದಲು ಪ್ರಜಾಪ್ರತಿನಿಧಿ ಸದಸ್ಯರು ಯಾರು ಇರುತ್ತಾರೋ, ಅಂತಹವರಿಗೆ ಧ್ವಜವನ್ನು ಹಾರಿಸಲು ಅವಕಾಶ ಮಾಡಿ ಕೊಡಬೇಕು. ಈ ವ್ಯವಸ್ಥೆಯನ್ನು ಮುಂದೆ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ಈ ಎರಡು ಮಾತನ್ನು ಹೇಳಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಹಿಸುತ್ತೇನೆ.

ಶ್ರೀ ಬಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ತಂದಂತಹ ಶ್ರೀಮಾನ್ ಬಂಗಾರಪ್ಪನವರ ನೇತೃತ್ವದ ಸರ್ಕಾರಕ್ಕೆ ವಿಶೇಷವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬಗ್ಗೆ ಅನೇಕ ವರ್ಷಗಳಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಅನೇಕ ರೀತಿಯ ಅಪಾದನೆಗಳನ್ನು ಮಾಡಿದ್ದರು. ಈ ಬೆಳಗಾಂ ವಿಚಾರದಲ್ಲಿ ' ಮತ್ತು ರಾಜ್ಯದ ಬೇರೆ ಬೇರೆ ಸಂಸ್ಥೆಗಳ ಮೇಲೆ ತಮ್ಮದೇ ಆದ ಬಾವುಟವನ್ನು ಹಾರಿಸುವಂತಹ ಒಂದು ವ್ಯವಸ್ಥೆ ಮಾಡಿದ್ದರ ಬಗ್ಗೆ ನಮ್ಮ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಆದುದರಿಂದ ಇಂತಹ ಒಂದು ಸಂದರ್ಭದಲ್ಲಿ ಈ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿರತಕ್ಕಂತಹ ಮಾನ್ಯ ಜಾರ್ಜ್‌ವರಿಗೂ ಮತ್ತೆ ಮಾನ್ಯ ಬಂಗಾರಪ್ಪನವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇದರ ಜೊತೆಯ ಈಗ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ಭಾವುಟವನ್ನು ಹಾರಿಸುವ ಪದ್ಧತಿಯನ್ನು ರದ್ದು ಮಾಡಬೇಕು ಅದರ ಬದಲು ಜನತಾ ಪ್ರತಿನಿಧಿಗಳು ಬಾವುಟ ಹಾರಿಸುವ ವ್ಯವಸ್ತೆಯನ್ನು ಜಾರಿಗೆ ತುರುವುದರ ಬಗ್ಗೆ ಗಮನಹರಿಸಬೇಕೆಂದು ಕಳಕಳಿಯಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ತಮಗೆ ವಂದನೆ ಮಾಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಬಿ. ಜಕನೂರ್ ಕಾಗ್ವಾಡ್ : ಮಾನ್ಯ ಅಧ್ಯಕ್ಷರೆ, ಈ ಕಾಯಿದೆಯನ್ನು ನಮ್ಮ ಸರ್ಕಾರದವರು ತ್ವರಿತವಾಗಿ ತಂದುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೂ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಒಂದು ಕಾಯಿದೆಯಲ್ಲಿ ನನಗೊಂದು ಸಂಶಯವಿದೆ. ಅದೇನೆಂದರೆ ಈ ಕಾಯಿದೆ ಕಾಗ್ನಿಸಬಲ್ ಆಫೀಸ್ಸ್ ಆಗುತ್ತದೋ ಇಲ್ಲವೋ ಎಂಬ ಸಂಶಯವಿದೆ. ಆದ್ದರಿಂದ ಇದನ್ನು ಕಾಗ್ನಿಸಬಲ್ ಆಫೆನ್ಸ್ಸ್ ಎಂದು ಮಾಡಬೇಕು ಯಾಕೆಂದರೆ ಮೂರು ತಿಂಗಳು ಹಾಗೂ ಐದು ಸಾವಿರ ದಂಡವೆಂದರೆ ಕಾಗ್ನಿಸಬಲ್ ಆಗುವುದಿಲ್ಲ. ಖಾಸಗಿ ದೂರು ಅದು ಇದು ಎಂದು ಡಿಲೇಯಾಗಿ ತೊಂದರೆಗಳು ಬರುತ್ತವೆ. ಆದುದರಿಂದ ಕಾಗ್ನಿಸಬಲ್ ಮಾಡಬೇಕು, ನಾನ್ಬೇಲಬಲ್ ಎಂದು ಮಾಡಬೇಕು. ಶಿಕ್ಷೆ ಎಷ್ಟೇ ಇರಲಿ. ಅದು ಮುಖ್ಯವಲ್ಲ ಆದರೆ ಕಾಗ್ನಿಸಬಲ್ ಮತ್ತು ನಾನ್‌ಲೇಯಿಲ್ ಎಂದು ಮಾಡಿದರೆ ಮಾತ್ರ ಈ ರೀತಿ ಆಗುವುದಿಲ್ಲ. ಅಧಿಕಾರಿಗಳು ಕಂಪ್ಲೆಂಟ್ ಕೊಡಬಹುದು ಅವನು ಮತ್ತೊಬ್ಬರಿಗೆ ಅಧಿಕಾರ ಕೊಡುವುದು ಸರ್ಕಾರಕ್ಕೆ ಅಧಿಕಾರ ಕೊಡುವುದು, ಇವೆಲ್ಲಾ ತೊಂದರೆಗಳು ಹೈಕೋರ್ಟಿನಲ್ಲಿ ಬರುತ್ತವೆ.

ಗೊಂದಲ

ಮಾನ್ಯ ಮಂತ್ರಿಗಳೇ ನಾನೂ ಹೇಳುವುದನ್ನು ದಯಮಾಡಿ ಕೇಳಿ ಈ ಕಾಯಿದೆಯಂತೆ ಬೇರೆ ಬಾವುಟವನ್ನು ಯಾರಾದರೂ ಏರಿಸಿದರೆ ದೂರು ಕೊಡುವವರು ಯಾರು? ನಂತರ ಸರ್ಕಾರದ ಅನುಮತಿ ಪಡೆಯಬೇಕು. ಇದೆಲ್ಲಾ ತೊಂದರೆಗಳು ಬರುತ್ತವೆ. ಆದುದರಿಂದ ಕಾಗ್ನಿಸಬಲ್ ಮಾಡಬೇಕು ಮತ್ತು ನಾನ್‌ಬೇಯಿಲ್ ಎಂದು ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಇದು ಸಾರ್ಥಕವಾಗುತ್ತದೆಂದು ಹೇಳಬಯಸುತ್ತೇನೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು, ಅದೇನೆಂದರೆ ಜನವರಿ 26ರಂದು ಮತ್ತು ಆಗಸ್ಟ್ 15ರಂದು ತಾಲ್ಲೂಕು ಮಟ್ಟದಲ್ಲಿ, ಸಬ್ಡಿವಿಷನ್ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳು ಧ್ವಜವನ್ನು ಹಾರಿಸುವ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎಂದು? ಆದರೆ ನನ್ನ ಪ್ರಕಾರ ಈ ಒಂದು ವಿಚಾರದಲ್ಲಿ ಅಡಚಣೆ ಬರುತ್ತದೆಂದು ಹೇಳುತ್ತೇವೆ. ಏನೆಂದರೆ ಒಂದು ತಾಲ್ಲೂಕಿಗೆ ಮೂರು ಜನ ಇಲ್ಲಿವೇ ನಾಲ್ಕು ಜನ ಎಂ.ಎಲ್.ಎ ಗಳಿರುತ್ತಾರೆ, ಅವರಲ್ಲಿ ಯಾರು ಭಾವುಟವನ್ನು ಹಾರಿಸಬೇಕು? ಆಮೇಲೆ 4-5 ತಾಲ್ಲೂಕಿಗೆ ಕೂಡ ಒಬ್ಬ ಎಂ.ಎಲ್.ಎ ಇರುತ್ತಾರೆ. ಆವಾಗ ಯಾರು ಭಾವುಟ ಹಾರಿಸಬೇಕು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಯಾರು ಹೆಚ್ಚಿನ ಭಾಗದಲ್ಲಿ ಬರುತ್ತಾರೋ? ಯಾರು ಹೆಚ್ಚು ಜನರನ್ನು ಪ್ರತಿನಿಧಿಸುತ್ತಾರೋ ಅವರು ಹಾರಿಸಬೇಕು.

ಶ್ರೀ ಎ.ಬಿ. ಜಕನೂರ್: ಸೂಕ್ತ ಪ್ರಾವಿಜನ್ ಈ ಬಗ್ಗೆ ಮಾಡಬೇಕು, ಮತ್ತೆ ಜಿಲ್ಲಾ ಮಟ್ಟದಲ್ಲಿ ಎಂ.ಪಿ.ಗಳಿರುತ್ತಾರೆ ಆಗ ರಾಜ್ಯಸಭೆಯವರು ಮಾಡಬೇಕೊ ಅಥವಾ ಲೋಕಸಭೆಯವರು ಮಾಡಬೇಕೋ? ಸಬ್‌ಡಿವಿಜನ್ ಮಟ್ಟದಲ್ಲಿ 8-10 ಶಾಸಕರುಗಳಿರುತ್ತಾರೆ. ಅಲ್ಲಿ ಯಾವ ಶಾಸಕರು ಮೂಡಬೇಕು? ಇವೆಲ್ಲವನ್ನು ಸ್ಪೆಸಿಫೈ ಮಾಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬೇಸಿಕ್ ಪ್ರಿನ್ಸಿಪಲ್ ಅನ್ನು ಒಪ್ಪಿಕೊಳ್ಳಿ ಕಾಂಟ್ರವರ್ಸಿ ಮಾಡಲು ಹೋಗಬೇಡಿ.

ಶ್ರೀ ಕರಿಯಣ್ಣ : ಜನತಾ ಪ್ರತಿನಿಧಿಗಳಿಗೆ ಅವಕಾಶ ಕೊಡುವುದರ ಬಗ್ಗೆ ವಿರೋಧ ಪಕ್ಷದವರು ಹೇಳಿದರು ಅದು ನಿಜವಾಗಿ ಸೂಕ್ತವಾದುದು. ಮೊದಲು ಇದು ಪಾಸ್ ಆಗಲಿ ಆಮೇಲೆ ರೂಲ್ಸ್ ಅಂಡ್ ರೆಗ್ಯುಲೇಷನ್ ಮಾಡುವಾಗ ಯಾರಿಗೆ ಅದ್ಯತೆ ಕೊಡಬೇಕೋ ಕೊಡೋಣ ಈಗಲೇ ಏತಕ್ಕೆ ಇದರ ಬಗ್ಗೆ ಚರ್ಚೆ ಬೇಕು?

ಶ್ರೀ ಎ.ಬಿ. ಜಕನೂರು: ಚಂದ್ರೇಗೌಡರ ಪ್ರಶ್ನೆಗೆ ಇಡೀ ಸದನ ಒಪ್ಪುತ್ತದೆ. ಆದರೆ ಈ ಪ್ರಾವಿಷನ್ ಮಾಡುವಾಗ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಕನಕಪುರ ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಕಳೆದ ಒಂದು ವರ್ಷದ ಕಾಲದಲ್ಲಿ ನಮ್ಮ ಸದನದ ಹಿರಿಯ ಸದಸ್ಯರಲ್ಲಿ ಒಬ್ಬರಾಗಿರತಕ್ಕ ಶ್ರೀ ವಾಟಾಳ ನಾಗರಾಜ್ ಮತ್ತು ನಮ್ಮ ನಾಯಕರಾಗಿರತಕ್ಕ ಶ್ರೀ ಡಿ.ಬಿ. ಚಂದ್ರೇಗೌಡರು ಈ ಒಂದು ವಿಧೇಯಕವನ್ನು ತರಬೇಕೆಂದು ಬಹಳ ಒತ್ತಾಯ ಮಾಡಿದ್ದರು. ಅದರ ಪರಿಣಾಮವಾಗಿ ಸರ್ಕಾರ ಅದನ್ನು ಒಪ್ಪಿಕೊಂಡು ಈ ವಿಧೇಯಕವನ್ನು ಇಲ್ಲಿ ಮಂಡಿಸಿರುವುದಕ್ಕೆ ಸರ್ಕಾರವನ್ನು ಶ್ಲಾಘಿಸುತ್ತೇನೆ. ನಾನು ಅಂದುಕೊಂಡಿದ್ದೆ ಈ ವಿಧೇಯಕವನ್ನು ಇವತ್ತೇ ಪರ್ಯಾಲೋಚನೆ ಮಾಡಿ ಮುಗಿಸುತ್ತಾರೆ ಎಂದು. ಇವತ್ತು ಇರತಕ್ಕದ್ದು ಮಂಡಿಸುವುದು ಅಷ್ಟೆ ಆ ಪ್ರಕಾರ ಮಂಡನೆ ಮಾಡಿದ್ದಾರೆ. ಆದರೆ ಇದು ಇಷ್ಟಕ್ಕೆ ನಿಲ್ಲಬಾರದು ಮಾನ್ಯ ಸಭಾನಾಯಕರು ಇದ್ದಾರೆ ಸಾಧ್ಯವಾದರೆ ಸರ್ಕಾರ ಒಪ್ಪುವುದಾದರೆ ಇವತ್ತೇ ಪರ್ಯಾಲೋಚನೆ ಮಾಡಿದರೆ ಒಳ್ಳೆಯದು. ಇವತ್ತೇ ಇದನ್ನು ಪರ್ಯಾಲೋಚನೆ ಮಾಡಿ ಈ ಒಂದು ವಿಧೇಯಕವನ್ನು ಕಾನೂನು ಮಾಡುವುದಕ್ಕೆ ಮಾನ್ಯ ಸಭಾನಾಯಕರು ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಇದಕ್ಕೆ ತಾವು ಅವಕಾಶ ಮಾಡಿ ಕೊಡಬೇಕೆಂದು ಹೇಳಿ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ಈ ಒಂದು ತಿದ್ದುಪಡಿ ವಿಧೇಯ ಬರಬೇಕೆಂದು ಹೇಳಿ ಸತತವಾಗಿ ಈ ಸಭೆಯಲ್ಲಿ ಹೋರಾಟಗಳು ಧರಣಿ, ಸಭಾತ್ಯಾಗ ಎಲ್ಲ ನಡೆದವು. ಇದಕ್ಕೆ ಕಾರಣ ಬೆಳಗಾವಿ ನಗರ ಮಾಹಾಪಾಲಿಕೆ ಮೇಲೆ ಮರಾಠಿ ಧ್ವಜ ಇರುವುದನ್ನು ತೆಗೆಸಬೇಕೆಂಬುದೇ ಒಂದು ಮುಖ್ಯ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ಈ ಒಂದು ಹೋರಾಟಕ್ಕೆ ಸರ್ಕಾರ, ವಿರೋಧ ಪಕ್ಷಗಳು ಎಲ್ಲವೂ ಒಕ್ಕೊರಲಿನಿಂದ ಮಾನ್ಯತೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮುಖ್ಯಮಂತ್ರಿಗಳ ಸುತ್ತ ಮಂತ್ರಿಗಳು ನಿಂತುಕೊಳ್ಳುತ್ತಾರೆ. ಸದಸ್ಯರು ಮಂತ್ರಿಗಳ ಕುರ್ಚಿಯಲ್ಲಿ ಕೂರುತ್ತಾರೆ. ಹೊಸ ಮಂತ್ರಿಗಳನ್ನೇನಾದರೂ ಮಾಡಿದ್ದೀರಾ? ಮಾಡಿದ್ದರೆ ಇಂಟ್ರಡ್ಯೂಸ್ ಮಾಡಿಕೊಡಿ. ಒಂದು ಗಂಟೆಯಿಂದ ಒಬ್ಬರು ಮಂತ್ರಿಗಳು ನಿಂತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಒಂದು ನಿಮಿಷ ಕೂಡ ಆಗಿಲ್ಲ. ನೀವು ಹೊಸ ಹೊಸ ಐಡಿಯಾಗಳನ್ನು ಕೊಡುತ್ತಿದ್ದೀರಿ. ಮಾನ್ಯ ಗುರುಪಾದಪ್ಪನವರು ಇವತ್ತೇ ಪಾಸ್ ಮಾಡಿ ಎಂದು ಹೇಳುತ್ತಿದ್ದೀರಿ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ಕಡೆ ಸೇರಿದ್ದೇವೆ. ಅದು ಬೇಡ ಎಂದರೆ ಇಲ್ಲಿಗೆ ಬಿಡುತ್ತೇನೆ. ನಮಗೇನಂತೆ. ವಾಟಾಳ್ ನಾಗರಾಜ್ ಅವರು ಇದಕ್ಕೆ ಏನು ಹೇಳುತ್ತಾರೆ?

ಶ್ರೀ ವಾಟಾಳ್ ನಾಗರಾಜ್ : ಇವತ್ತೇ ಇದು ಮುಗಿಯಲಿ, ಇವತ್ತೇ ಪಾಸ್ ಆಗಲಿ. ನನಗೆ ಇದರಿಂದ ನಿಜವಾಗಿ ಅತ್ಯಂತ ಸಂತೋಷವಾಗಿದೆ. ಎಷ್ಟೋ ವರ್ಷಗಳಿಂದ ಈ ಬಗ್ಗೆ ಹೋರಾಟ, ಬೇಡಿಕೆ, ಒತ್ತಾಯ ಎಲ್ಲ ನಡೆದಿದೆ. ಇವತ್ತಿನ ದಿವಸ ಇದು ಪಾಸ್ ಆದರೆ 4 ಕೋಟಿ ಕನ್ನಡ ಜನತೆ ತಮಗೆ ಅಭಿನಂದಿಸುತ್ತದೆ. ನಾನು "ಶಭಾಷ್ ಬಂಗಾರಪ್ಪ" ಎಂದು ಹೇಳುತ್ತೇನೆ. ಇದು ಒಳ್ಳೆಯ ಕಾರ್ಯ ಈ ಒಂದು ವಿಧೇಯಕವನ್ನು ತರತಕ್ಕ ಗಟ್ಟಿ ಮನಸ್ಸು ಮಾಡಿದ ಸರ್ಕಾರ ಹಾಗೂ ಇದಕ್ಕೆ ಬೆಂಬಲವಾಗಿ ನಿಂತ ಶ್ರೀಮಾನ್ ವೀರಪ್ಪ ಮೊಯಿಲಿಯವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು. ಅವರು ನಿಜವಾದ ಸೂತ್ರಧಾರಿಗಳು.

ಶ್ರೀ ಎಸ್. ಬಂಗಾರಪ್ಪ : ಈಗ ಇದರ ಮೇಲೆ ಭಾಷಣ ಸಾಕು. ಆಮೇಲೆ ಬೇರಾದರೆ ಮಾತನಾಡಬಹುದು. ಏಕೆಂದರೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರ ಕೊಡಲು ನನಗೆ ತಡವಾಗುತ್ತದೆ. ಆಮೇಲೆ ಖಾಸಗಿ ಸದಸ್ಯರ ವಿಧೇಯಕ ಇದೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನಾನು ಇವತ್ತು ನಿಜವಾಗಿಯೂ .....

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾಗರಾಜ್ ಅವರೇ, ಈಗ ಮುಖ್ಯಮಂತ್ರಿಗಳು ಹೇಳಿದ್ದು ಇಂಟ್ರೊಡ್ಯೂಸ್ ಮಾಡಿದ್ದೇವೆ. ಕನ್ನಿಡರೇಷನ್ ಕಾಲಕ್ಕೆ ಮಾತನಾಡೋಣ ಎಂದು. ಕನ್ನಿಡರೇಷನ್ ಮಾಡೋಣ, ಮುಗಿಸಿಬಿಡೋಣ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಈಗ ಇಷ್ಟೇ ವಿಚಾರ ; ಇವತ್ತು ಖಾಸಗಿ ನಿರ್ಣಯಗಳು ಬೇರೆ ಇದೆ. ದಯವಿಟ್ಟು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ನನ್ನ ರಿಪ್ಲೈ ಆಗಬೇಕು ಗವರ್ನರ್ ಅಡ್ರೆಸ್‌ಗೆ. ನಾನು ನೀವು ಮಾತನಾಡುವುದು ಬೇಡ ಎಂದು ಹೇಳುತ್ತಿಲ್ಲ. ನೀವು ಮಾತನಾಡಿ. ನೀವು ಮಾತನಾಡಲೇಬೇಕು ಎಂಬುದು ನಮ್ಮ ಆಶಯ ಕೂಡ ಇದೆ. ಮತ್ತೆ ಕನ್ನಿಡರೇಷನ್ ಆಫ್ ಪಾಸಿಂಗ್‌ಗೆ ಮೂವ್ ಮಾಡಬೇಕು. ಮಾನ್ಯ ಸ್ಪೀಕರ್ ಅವರು ಅಗ್ರಿ ಆದರೆ ಮತ್ತು ಹೌಸ್ ಅಗ್ರಿ ಆದರೆ.

ಶ್ರೀ ಬಿ.ಹೆಚ್ ಬನ್ನಿಕೋಡ್: ನಾವು ಯಾರೂ ಮಾತನಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಹಾಗಾದರೆ ನೀವೇ ಲಾಸ್ಟ್ ಸ್ಪೀಕರ್? ಓ.ಕೆ.

ಉಪಾಧ್ಯಕ್ಷರು : ಎಲ್ಲರಿಗೂ ಮಾತನಾಡಿಬಿಟ್ಟಿದ್ದಾರೆ. ಮತ್ತೆ ಏನೂ ಮಾತನಾಡುವುದಿಲ್ಲ..

ಶ್ರೀ ಎಸ್. ಬಂಗಾರಪ್ಪ : ಆಗಬಹುದು. ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಈ ಒಂದು ತಿದ್ದುಪಡಿಯನ್ನು ತರಬೇಕಾದರೂ ಇದಕ್ಕೆ ಒಂದು ಎದೆಗಾರಿಕೆ ಬೇಕು. ನಾನು ಸಂತೋಷಪಡುತ್ತೇನೆ. ಇದು ಹೃದಯದಿಂದ ಹೇಳತಕ್ಕ ಮಾತು. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಇದರ ಹಿನ್ನೆಯಲ್ಲಿ ಮಾನ್ಯ ಸಂಸದೀಯ ಸಚಿವರಾದ ಶ್ರೀಮಾನ್ ವೀರಪ್ಪ ಮೊಯಿಲಿ ಇದ್ದು ಅವರು ಈ ವಿಧೇಯಕ ತರುತ್ತೇವೆಂದು ಅನೇಕ ಬಾರಿ ಈ ಸದನದಲ್ಲಿ ಹೇಳಿದ್ದರು. ಮಾತಿನಂತೆ ತಮ್ಮ ವಚನವನ್ನು ಉಳಿಸಿಕೊಂಡಿದ್ದಾರೆ. ನಿಜವಾಗಿಯೂ ಈ ಸರ್ಕಾರವನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂಧಿಸುತ್ತೇನೆ. ಮಾನ್ಯ ವೀರಪ್ಪ ಮೊಯಿಲಿ

ಅವರನ್ನೂ ಅಭಿನಂದಿಸುತ್ತೇನೆ ಹಾಗೂ ಸಂಬಂಧಪಟ್ಟ ನಗರಾಭಿವೃದ್ಧಿ ಮಂತ್ರಿಗಳನ್ನೂ ನನ್ನ ಮಿತ್ರರೂ ಆದ ಜಾರ್ಜ್ ಅವರು, ಪ್ರಾಮಾಣಿಕವಾಗಿ ಮೂರೂ ಜನರು ಸೇರಿ ಇದಕ್ಕೆ ಒಳ್ಳೆಯ ರೂಪವನ್ನು ಕೊಟ್ಟಿದ್ದಾರೆ. ಇದು ಇತಿಹಾಸದಲ್ಲಿ ಬರೆಯತಕ್ಕ ದಿನ. ಅನೇಕ ವರ್ಷಗಳಿಂದ ಬೆಳಘಾವಿ ಮಹಾನಗರ ಪಾಲಿಕೆ ಮೇಲೆ ತಮ್ಮದೇ ಆದ ಮರಾಠಿ ಧ್ವಜ ಹಾಕಿ ಮಹಾನಗರ ಪಾಲಿಕೆಯನ್ನು ತಮ್ಮ ಪಕ್ಷದ ಕಾರ್ಯಾಲಯ ಮಾಡಿಕೊಂಡಂತೆ ಮಾಡಿಕೊಂಡಿದ್ದರು. ಇವತ್ತು ಅದು ಕಡೆಗೊಂಡು ನಾಳೆಯಿಂದಲೇ ಈ ಬಾವುಟವನ್ನು ಕೆಳಗೆ ಇಳಿಸತಕ್ಕ ಒಂದು ವಿಧೇಯಕ ಇಲ್ಲಿ ಬರುತ್ತಾ ಇರತಕ್ಕದ್ದು ನಿಜವಾಗಿಯೂ ಮೆಚ್ಚತಕ್ಕದ್ದು. ಆ ಮೆಚ್ಚುಗೆಯನ್ನು ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ನನಗಂತೂ ಒಂದು ಹಂಡೆ ಹಾಲು ಕುಡಿದಂಥ ಸಂತೋಷವಾಗಿದೆ ಈ ದಿನ. ಕನ್ನಡಿಗರೆಲ್ಲರೂ ಇಂದು ಸಂತೋಷಪಡುವ ದಿನ. ಇದೇ ಧಾಟಿಯಲ್ಲಿ ಬೆಳಗಾವಿ ಗಡಿ, ಒಂದು ಗಂಡು ಮೆಟ್ಟಿನ ನೆಲ ಏನಿದೆ, ಈ ಬೆಳಗಾವಿಯ ಸಮಗ್ರ ಅಭಿವೃದ್ಧಿಯ ಬಗ್ಗೆಯೂ ಈ ಸರ್ಕಾರ ಗಮನ ಹರಿಸಬೇಕು ಎಂದು ಈ ಸರ್ಕಾರಕ್ಕೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈಗ ಜನಗಣತಿ ನಡೆಯುತ್ತಿದೆ. ಅಲ್ಲಿ ಮರಾಠಿಯಲ್ಲಿ ಫಾರಂಗಳನ್ನು ಕೊಡುತ್ತಿದ್ದಾರೆ. ಅನೇಕ ಜನ ಕನ್ನಡದವರಿಗೆ ಯಾವರೀತಿ ಹೆಸರುಗಳನ್ನು ನೋಂದಾಯಿಸಬೇಕು ಎಂಬ ಪ್ರಶ್ನೆ ಬಂದಿದೆ. ಆದ್ದರಿಂದ ಈ ಪ್ರಶ್ನೆ ಹೋಗಲಾಡಿಸುವುದಕ್ಕೆ ಕೂಡಲೇ ಕನ್ನಡದಲ್ಲಿ ಫಾರಂಗಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ವಿಧೇಯಕದ ಬಗ್ಗೆ ನಾನು ನಿಜವಾಗಿಯೂ ಬಹಳ ಸಂತೋಷಪಟ್ಟಿದ್ದೇನೆ. ಇಂಥ ವಿಧೇಯಕವನ್ನು ತಂದಂಥ ಸರ್ಕಾರವನ್ನು ನಾನು ನೂರ್ಮಡಿ ಅಭಿನಂದಿಸುತ್ತೇನೆ. ಈ ವಿಧೇಯಕವನ್ನು ಇವತ್ತೇ ತೆಗೆದುಕೊಂಡು ಸಂಪೂರ್ಣವಾಗಿ ಇದನ್ನು ಒಪ್ಪಬೇಕು ಎಂದು ಕೇಳಿಕೊಂಡು ತಮ್ಮ ಮೂಲಕ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಡೀ ಸದನ ಈ ಒಂದು ವಿಧೇಯಕವನ್ನು ಸ್ವಾಗತ ಮಾಡಿದ್ದಕ್ಕೆ ತಮಗೆಲ್ಲರಿಗೂ ಅಭಿನಂದಿಸಿ ಆದಷ್ಟು ಬೇಗ ಇದನ್ನು ಪಾಸ್ ಮಾಡಿಕೊಟ್ಟರೆ ಇದು ಒಂದು ಮಸೂದೆಯಾಗುತ್ತದೆಂದು ಹೇಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವನೆ ಹೀಗಿದೆ : "1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ : ಈ ಮ್ಯಾಟರ್ ಅಜೆಂಡಾದಲ್ಲಿ ಇಲ್ಲ. ಆದ್ದರಿಂದ ಅದಕ್ಕನುಗುಣವಾಗಿ ಕನ್ಸಿಡರೇಷನ್ ಮತ್ತು ಪಾಸಿಂಗ್ ಎಂದು ತಾವು ಒಂದು ಮಾತು ಆಡಿದರೆ, ಅದು ರೆಕಾರ್ಡ್ನಲ್ಲಿದ್ದರೆ ಒಳ್ಳೆಯದು.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಬೇಕು.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ.